



(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ಸರ್ವ ಪ್ರಶಂಸೆಗಳೂ ಭೂಮಿ-ಆಕಾಶಗಳಲ್ಲಿರುವ ಪ್ರತಿಯೊಂದು ವಸ್ತುವಿನ ಒಡೆಯನಾಗಿರುವ ಅಲ್ಲಾಹನಿಗೆ ಮೀಸಲು ಮತ್ತು ಪರಲೋಕದಲ್ಲೂ ಪ್ರಶಂಸೆಗಳು ಅವನಿಗೇ ಇದೆ. ಅವನು ವಿವೇಕಪೂರ್ಣನೂ ವಿವರಪೂರ್ಣನೂ ಆಗಿರುತ್ತಾನೆ.

اَلْحَمْدُ لِلّٰهِ الَّذِىْ لَهٗ مَا فِى السَّمٰوٰتِ
وَمَا فِى الْاَرْضِ وَلَهُ الْحَمْدُ فِى الْاٰخِرَةِ ؕ
وَهُوَ الْحَكِيْمُ الْخَبِيْرُ ①

2. ಭೂಮಿಯೊಳಗೆ ಹೋಗುವ ಹಾಗೂ ಅದರೊಳಗಿಂದ ಹೊರ ಬರುವ ಮತ್ತು ಆಕಾಶದಿಂದ ಇಳಿಯುವ ಹಾಗೂ ಅದರ ಮೇಲೇರುವ ಸಕಲವನ್ನೂ ಅವನು ಬಲ್ಲವನಾಗಿರುತ್ತಾನೆ. ಅವನು ಕರುಣಾನಿಧಿಯೂ ಕ್ಷಮಾಶೀಲನೂ ಆಗಿರುತ್ತಾನೆ.

يَعْلَمُ مَا يَلِجُ فِى الْاَرْضِ وَمَا يَخْرُجُ
مِنْهَا وَمَا يَنْزِلُ مِنَ السَّمَآءِ وَمَا يَعْرُجُ
فِيْهَا ؕ وَهُوَ الرَّحِيْمُ الْغَفُوْرُ ②

3. ನಮ್ಮ ಮೇಲೆ ಪುನರುತ್ಥಾನದ ಘಳಿಗೆ ಬರುವುದಿಲ್ಲವಲ್ಲ ಎಂದು ಸತ್ಯನಿಷೇಧಿಗಳು ಹೇಳುತ್ತಾರೆ. ಹೇಳಿರಿ- "ಪರೋಕ್ಷ ಜ್ಞಾನಿಯಾದ ನನ್ನ ಪ್ರಭುವಿನಾಣೆಗೂ ಅದು ನಿಮ್ಮ ಮೇಲೆ ಬಂದೇ ತೀರುವುದು. ಆಕಾಶಗಳಲ್ಲಾಗಲಿ, ಭೂಮಿಯಲ್ಲಾಗಲಿ, ಅಣು ಮಾತ್ರದಷ್ಟು ವಸ್ತುವೂ ಅವನಿಂದ ಅಡಗಿರುವುದಿಲ್ಲ. ಅಣುವಿಗಿಂತ ದೊಡ್ಡದೂ ಇಲ್ಲ ಅದಕ್ಕಿಂತ ಚಿಕ್ಕದೂ ಇಲ್ಲ. ಎಲ್ಲವೂ ಒಂದು ಸುಸ್ಪಷ್ಟ ಗ್ರಂಥದಲ್ಲಿ ಲಿಖಿತವಿದೆ."

وَقَالَ الَّذِيْنَ كَفَرُوْا لَا تَاْتِيْنَا السَّاعَةُ ؕ
قُلْ بَلٰى وَرَبِّىْ لَتَاْتِيَنَّكُمْ ۙ عٰلِمِ الْغَيْبِ ۚ
لَا يَعْزُبُ عَنْهُ مِثْقَالُ ذَرَّةٍ فِى السَّمٰوٰتِ
وَلَا فِى الْاَرْضِ وَلَاۤ اَصْغَرُ مِنْ ذٰلِكَ
وَلَاۤ اَكْبَرُ اِلَّا فِىْ كِتٰبٍ مُّبِيْنٍ ③

4. ಈ ಪುನರುತ್ಥಾನ ದಿನವು ಸತ್ಯವಿಶ್ವಾಸವನ್ನು ಸ್ವೀಕರಿಸಿದವರಿಗೂ ಸತ್ಕರ್ಮಗಳನ್ನೆಸಗಿದವರಿಗೂ ಪ್ರತಿಫಲ ನೀಡಲಿಕ್ಕಾಗಿ ಬರುವುದು. ಅವರಿಗಾಗಿ ಕ್ಷಮೆಯೂ ಸನ್ಮಾನ್ಯ ಜೀವನಾಧಾರವೂ ಇವೆ.

لِّيَجْزِىَ الَّذِيْنَ اٰمَنُوْا وَعَمِلُوا الصّٰلِحٰتِ ؕ
اُولٰٓئِكَ لَهُمْ مَّغْفِرَةٌ وَّرِزْقٌ كَرِيْمٌ ④

5. ನಮ್ಮ ಸೂಕ್ತಗಳನ್ನು ಕೀಳಾಗಿಸಲು ಶ್ರಮಿಸಿದವರಿಗೆ ಅತಿ ನಿಕೃಷ್ಟ ತರದ ವೇದನಾತ್ಮಕ ಯಾತನೆ ಇದೆ.

وَالَّذِيْنَ سَعَوْ فِىْۤ اٰيٰتِنَا مُعٰجِزِيْنَ
اُولٰٓئِكَ لَهُمْ عَذَابٌ مِّنْ رِّجْزٍ اَلِيْمٌ ⑤

6. ಪೈಗಂಬರರೇ, ನಿಮ್ಮ ಪ್ರಭುವಿನ ವತಿಯಿಂದ ನಿಮ್ಮ ಮೇಲೆ ಅವತೀರ್ಣ ಗೊಳಿಸಲ್ಪಟ್ಟಿರುವುದೆಲ್ಲಾ ಪರಮ ಸತ್ಯವೆಂದೂ ಪ್ರಬಲನೂ ಪ್ರಶಂಸಾರ್ಹನೂ ಆದ ಅಲ್ಲಾಹನ ಮಾರ್ಗವನ್ನು ಅದು ತೋರಿಸುತ್ತದೆಂದೂ ಜ್ಞಾನ ನೀಡಲ್ಪಟ್ಟವರು ಚೆನ್ನಾಗಿ ತಿಳಿದಿರುತ್ತಾರೆ.

وَيَرَى الَّذِيْنَ اُوْتُوا الْعِلْمَ الَّذِيْٓ اُنْزِلَ
اِلَيْكَ مِنْ رَّبِّكَ هُوَ الْحَقَّ ۙ وَيَهْدِيْٓ
اِلٰى صِرَاطِ الْعَزِيْزِ الْحَمِيْدِ ٦

7. "ನಿಮ್ಮ ದೇಹದ ಪ್ರತಿಯೊಂದು ಕಣವೂ ಚೆಲ್ಲಾಪಿಲ್ಲಿಯಾಗಿ ಹೋಗಿ ಬಿಟ್ಟ ಬಳಿಕ ನೀವು ಪುನಃ ಹೊಸತಾಗಿ ಸೃಷ್ಟಿಸಲ್ಪಡುವಿರೆಂಬ ಸುದ್ದಿಯನ್ನು ತಿಳಿಸುವಂತಹ ಒಬ್ಬ ವ್ಯಕ್ತಿಯನ್ನು ನಾವು ನಿಮಗೆ ತೋರಿಸಿ ಕೊಡಲೇ?

وَقَالَ الَّذِيْنَ كَفَرُوْا هَلْ نَدُلُّكُمْ
عَلٰى رَجُلٍ يُّنَبِّئُكُمْ اِذَا مُزِّقْتُمْ كُلَّ
مُمَزَّقٍ ۙ اِنَّكُمْ لَفِيْ خَلْقٍ جَدِيْدٍ ٧

8. ಇವನು ಅಲ್ಲಾಹನ ಹೆಸರಿನಿಂದ ಸುಳ್ಳನ್ನು ಸೃಷ್ಟಿಸುತ್ತಾನೋ ಅಥವಾ ಇವನಿಗೆ ಹುಚ್ಚು ಹಿಡಿದಿದೆಯೋ ಎಂಬುದು ತಿಳಿಯದು" ಎಂದು ಸತ್ಯನಿಷೇಧಿಗಳು ಜನರೊಡನೆ ಹೇಳುತ್ತಾರೆ. ಹಾಗಲ್ಲ, ವಾಸ್ತವದಲ್ಲಿ ಪರಲೋಕವನ್ನು ನಂಬದವರು ಯಾತನೆಗೊಳಗಾಗುವರು ಮತ್ತು ಅವರೇ ಅತ್ಯಂತ ಪಥಭ್ರಷ್ಟರು.

اَفْتَرٰى عَلَى اللّٰهِ كَذِبًا اَمْ بِهٖ جِنَّةٌ ۗ
بَلِ الَّذِيْنَ لَا يُؤْمِنُوْنَ بِالْاٰخِرَةِ
فِي الْعَذَابِ وَالضَّلٰلِ الْبَعِيْدِ ٨

9. ಇವರನ್ನು ಮುಂದಿನಿಂದಲೂ ಹಿಂದಿನಿಂದಲೂ ಸುತ್ತುವರಿದು ಕೊಂಡಿರುವ ಭೂಮಿ-ಆಕಾಶಗಳನ್ನು ಇವರೆಂದೂ ಕಂಡಿಲ್ಲವೇ? ನಾವಿಷ್ಟಪಟ್ಟರೆ ಇವರನ್ನು ಭೂಮಿಯಲ್ಲಿ ಹುಗಿದು ಬಿಡುವೆವು ಅಥವಾ ಆಕಾಶದ ಕೆಲವು ತುಂಡುಗಳನ್ನು ಇವರ ಮೇಲೆ ಬೀಳಿಸಿ ಬಿಡುವೆವು. ವಾಸ್ತವದಲ್ಲಿ ಪಶ್ಚಾತ್ತಾಪ ಪಟ್ಟು ಅಲ್ಲಾಹನ ಕಡೆಗೆ ಮರಳುವಂತಹ ಪ್ರತಿಯೊಬ್ಬ ದಾಸನಿಗೂ ಇದರಲ್ಲೊಂದು ನಿದರ್ಶನವಿದೆ.

اَفَلَمْ يَرَوْا اِلٰى مَا بَيْنَ اَيْدِيْهِمْ وَمَا
خَلْفَهُمْ مِّنَ السَّمَآءِ وَالْاَرْضِ ۗ اِنْ
نَّشَاْ نَخْسِفْ بِهِمُ الْاَرْضَ اَوْ نُسْقِطْ
عَلَيْهِمْ كِسَفًا مِّنَ السَّمَآءِ ۗ اِنَّ فِيْ ذٰلِكَ
لَاٰيَةً لِّكُلِّ عَبْدٍ مُّنِيْبٍ ٩ ع

10-11. ನಾವು ದಾವೂದರಿಗೆ ನಮ್ಮ ಕಡೆಯಿಂದ ಮಹಾ ಅನುಗ್ರಹ ಪ್ರದಾನ ಮಾಡಿದ್ದೆವು. "ಪರ್ವತಗಳೇ, ಇವರೊಡನೆ ಸಾಮರಸ್ಯ ಹೊಂದಿರಿ" (ಎಂದು ನಾವು ಅಪ್ಪಣೆ ಕೊಟ್ಟೆವು ಮತ್ತು ಇದೇ ಆಜ್ಞೆಯನ್ನು) ಪಕ್ಷಿಗಳಿಗೆ ಕೊಟ್ಟೆವು. ಕವಚಗಳನ್ನು ತಯಾರಿಸಿರಿ ಮತ್ತು ಅವುಗಳ ಕುಣಿಕೆಗಳನ್ನು ಸರಿಯಾದ ಪ್ರಮಾಣದಲ್ಲಿರಿಸಿರಿ ಎಂಬ ಮಾರ್ಗದರ್ಶನದೊಂದಿಗೆ ನಾವು ಅವರಿಗಾಗಿ ಕಬ್ಬಿಣವನ್ನು ಮೃದುಗೊಳಿಸಿದೆವು. (ದಾವೂದರ ಸಂತತಿಗಳೇ) ಸತ್ಕರ್ಮವೆಸಗಿರಿ, ನೀವು ಮಾಡುವುದನ್ನೆಲ್ಲ ನಾನು ನೋಡುತ್ತಿದ್ದೇನೆ.

وَلَقَدْ اٰتَيْنَا دَاوٗدَ مِنَّا فَضْلًا ۗ يٰجِبَالُ
اَوِّبِيْ مَعَهٗ وَالطَّيْرَ ۚ وَاَلَنَّا لَهُ
الْحَدِيْدَ ١٠
اَنِ اعْمَلْ سٰبِغٰتٍ وَّقَدِّرْ فِي السَّرْدِ
وَاعْمَلُوْا صَالِحًا ۗ اِنِّيْ بِمَا تَعْمَلُوْنَ بَصِيْرٌ ١١

12. ನಾವು ಸುಲೈಮಾನರಿಗೆ ಗಾಳಿಯನ್ನು ನಿಯಂತ್ರಿಸಿಕೊಟ್ಟೆವು. ಅದರ

وَلِسُلَيْمٰنَ الرِّيْحَ غُدُوُّهَا شَهْرٌ وَّ

رَوَاحُهَا شَهْرٌ ۚ وَأَسَلْنَا لَهُ عَيْنَ
الْقِطْرِ ۖ وَمِنَ الْجِنِّ مَن يَعْمَلُ بَيْنَ
يَدَيْهِ بِإِذْنِ رَبِّهِ ۖ وَمَن يَزِغْ مِنْهُمْ
عَنْ أَمْرِنَا نُذِقْهُ مِنْ عَذَابِ السَّعِيرِ ١٢

ಬೆಳಗಿನ ಚಲನೆ ಒಂದು ತಿಂಗಳ ದಾರಿಯ ವರೆಗೆ ಮತ್ತು ಸಂಜೆಯ ಚಲನೆ ಒಂದು ತಿಂಗಳ ದಾರಿಯ ವರೆಗೆ. ನಾವು ಅವರಿಗಾಗಿ ಕರಗಿದ ತಾಮ್ರದ ಚಿಲುಮೆಯನ್ನು ಹರಿಸಿದೆವು ಮತ್ತು ತಮ್ಮ ಪ್ರಭುವಿನ ಅಪ್ಪಣೆ ಪ್ರಕಾರ ಅವರ ಮುಂದೆ ಕೆಲಸ ಮಾಡುತ್ತಿದ್ದ ಯಕ್ಷಗಳನ್ನು ಅವರ ಅಧೀನಕ್ಕೆ ಕೊಟ್ಟೆವು. ಅವರ ಪೈಕಿ ನಮ್ಮ ಆಜ್ಞೋಲ್ಲಂಘನೆ ಮಾಡುತ್ತಿದ್ದವನಿಗೆ ನಾವು ಧಗಧಗಿಸುವ ಅಗ್ನಿಯ ಸವಿಯನ್ನುಣಿಸುತ್ತಿದ್ದೆವು.

يَعْمَلُونَ لَهُ مَا يَشَاءُ مِن مَّحَارِيبَ
وَتَمَاثِيلَ وَجِفَانٍ كَالْجَوَابِ وَقُدُورٍ
رَّاسِيَاتٍ ۚ اعْمَلُوا آلَ دَاوُودَ شُكْرًا ۚ
وَقَلِيلٌ مِّنْ عِبَادِيَ الشَّكُورُ ١٣

13. ಅವರು ಇವರಿಗಾಗಿ (ಸುಲೈಮಾನರಿಗಾಗಿ) ಇವರು ಇಚ್ಛಿಸಿದುದನ್ನೆಲ್ಲ ಮಾಡುತ್ತಿದ್ದರು. ಉನ್ನತ ಕಟ್ಟಡಗಳು, ಚಿತ್ರಗಳು,[1] ದೊಡ್ಡ ದೊಡ್ಡ ಕೊಳಗಳಂತಹ ಹರಿವಾಣಗಳು ಮತ್ತು ತಮ್ಮ ಸ್ಥಾನದಿಂದ ಸರಿಯದ ಬೃಹತ್ ಕಡಾಯಗಳು. ದಾವೂದರ ಸಂತತಿಯೇ ಕೃತಜ್ಞತೆಯ ರೀತಿಯಲ್ಲಿ ಕರ್ಮವೆಸಗಿರಿ.[2] ನನ್ನ ದಾಸರಲ್ಲಿ ಕೆಲವು ಮಂದಿ ಮಾತ್ರ ಕೃತಜ್ಞರಾಗಿದ್ದಾರೆ.

فَلَمَّا قَضَيْنَا عَلَيْهِ الْمَوْتَ مَا دَلَّهُمْ
عَلَىٰ مَوْتِهِ إِلَّا دَابَّةُ الْأَرْضِ تَأْكُلُ
مِنسَأَتَهُ ۖ فَلَمَّا خَرَّ تَبَيَّنَتِ الْجِنُّ أَن
لَّوْ كَانُوا يَعْلَمُونَ الْغَيْبَ مَا لَبِثُوا
فِي الْعَذَابِ الْمُهِينِ ١٤

14. ಅನಂತರ ನಾವು ಸುಲೈಮಾನರಿಗೆ ಮರಣವನ್ನು ವಿಧಿಸಿದಾಗ ಯಕ್ಷಗಳಿಗೆ ಅವರ ಮರಣದ ಸುಳಿವು ಕೊಡಲು ಅವರ ಲಾಠಿಯನ್ನು ತಿನ್ನುತ್ತಿದ್ದ ಕೀಟದ ಹೊರತು ಬೇರಾವ ವಸ್ತುವೂ ಇರಲಿಲ್ಲ. ಹೀಗೆ ಸುಲೈಮಾನರು ಬಿದ್ದಾಗ ತಮಗೆ ಪರೋಕ್ಷ ಜ್ಞಾನವಿರುತ್ತಿದ್ದರೆ ತಾವು ಇಂತಹ ಅಪಮಾನಕರ ಯಾತನೆಯಲ್ಲಿ ಬೀಳುತ್ತಿರಲಿಲ್ಲವೆಂಬ ಮಾತು ಯಕ್ಷಗಳಿಗೆ ಬಯಲಾಯಿತು.

لَقَدْ كَانَ لِسَبَإٍ فِي مَسْكَنِهِمْ آيَةٌ ۖ
جَنَّتَانِ عَن يَمِينٍ وَشِمَالٍ ۖ
كُلُوا مِن رِّزْقِ رَبِّكُمْ وَاشْكُرُوا لَهُ ۚ
بَلْدَةٌ طَيِّبَةٌ وَرَبٌّ غَفُورٌ ١٥

15. 'ಸಬಾ'ದವರಿಗೆ ಅವರ ಸ್ವಂತ ವಾಸಸ್ಥಾನದಲ್ಲೇ ಒಂದು ನಿದರ್ಶನ ವಿತ್ತು. ಬಲಭಾಗದಲ್ಲೂ ಎಡಭಾಗದಲ್ಲೂ ಎರಡು ತೋಟಗಳು.[3] ನಿಮ್ಮ ಪ್ರಭು ಕೊಟ್ಟ ಆಹಾರವನ್ನುಣ್ಣಿರಿ ಮತ್ತು ಅವನಿಗೆ ಕೃತಜ್ಞತೆ ಸಲ್ಲಿಸಿರಿ. ನಾಡು ಉತ್ತಮವೂ ಪರಿಶುದ್ಧವೂ ಆಗಿತ್ತು. ಪ್ರಭು ಕ್ಷಮಾಶೀಲನಾಗಿದ್ದನು.

فَأَعْرَضُوا فَأَرْسَلْنَا عَلَيْهِمْ سَيْلَ

16. ಆದರೆ ಅವರು ವಿಮುಖರಾಗಿ ಹೋದರು. ಕೊನೆಗೆ ನಾವು ಅವರ

1. ಚಿತ್ರಗಳು ಎಂದರೆ ಅವು ಮಾನವರ ಅಥವಾ ಪ್ರಾಣಿಗಳ ಚಿತ್ರಗಳೇ ಆಗಿರಬೇಕಾಗಿಲ್ಲ. ಹ. ಸುಲೈಮಾನ್, ಮೂಸಾರ(ಅ) ಶರೀಅತ್‌ನ ಪಾಲಕರಾಗಿದ್ದರು. ಮಾನವರ ಮತ್ತು ಪ್ರಾಣಿಗಳ ಚಿತ್ರ ತಯಾರಿಸುವುದು ಮುಹಮ್ಮದ್‌ರ(ಸ) ಶರೀಅತ್‌ನಲ್ಲಿ ನಿಷಿದ್ಧವಾಗಿರುವಂತೆಯೇ ಹ. ಮೂಸಾರ(ಅ) ಶರೀಅತ್‌ನಲ್ಲೂ ನಿಷಿದ್ಧವಾಗಿತ್ತು.
2. ಅರ್ಥಾತ್- ಕೃತಜ್ಞ ದಾಸರಂತೆ ಕಾರ್ಯವೆಸಗಿರಿ.
3. ಇದರ ಅರ್ಥ ಸಮಸ್ತ ದೇಶದಲ್ಲಿ ಎರಡೇ ತೋಟಗಳಿದ್ದುವು ಎಂದಲ್ಲ. ಸಬಾದ ಸಮಸ್ತ ಸಾಮ್ರಾಜ್ಯ ಉದ್ಯಾನವನವಾಗಿ ಮಾರ್ಪಟ್ಟಿತ್ತು ಎಂಬುದು ಇದರ ಅರ್ಥ. ವ್ಯಕ್ತಿಯೊಬ್ಬ ಎಲ್ಲೇ ನಿಂತು ನೋಡಿದರೂ ಎಡಕ್ಕೂ ಬಲಕ್ಕೂ ಅವನಿಗೆ ಉದ್ಯಾನಗಳೇ ಗೋಚರಿಸುತ್ತವೆ.

ಮೇಲೆ ಅಣೆಕಟ್ಟು ಮುರಿದ ಮಹಾಪೂರವನ್ನು ಕಳುಹಿಸಿಬಿಟ್ಟೆವು ಮತ್ತು ಅವರ ಹಿಂದಿನ ಎರಡು ತೋಟಗಳ ಸ್ಥಾನದಲ್ಲಿ ಅತ್ಯಂತ ಕಹಿಫಲಗಳು ಝಾವಕ ವೃಕ್ಷಗಳು ಮತ್ತು ಕೆಲವು ಬೋರೆ ಮರಗಳಿಂದ ಕೂಡಿದ ಬೇರೆ ಎರಡು ತೋಟಗಳನ್ನು ಅವರಿಗೆ ಕೊಟ್ಟೆವು.

الْعَرِمِ وَبَدَّلْنٰهُمْ بِجَنَّتَيْهِمْ جَنَّتَيْنِ
ذَوَاتَيْ اُكُلٍ خَمْطٍ وَّاَثْلٍ وَّشَيْءٍ
مِّنْ سِدْرٍ قَلِيْلٍ ﴿١٦﴾

17. ಇದು, ನಾವು ಅವರ ಸತ್ಯನಿಷೇಧಕ್ಕೆ ನೀಡಿದ ಪ್ರತಿಫಲವಾಗಿತ್ತು. ಇಂತಹ ಪ್ರತಿಫಲವನ್ನು ಕೃತಘ್ನರ ಹೊರತು ಇನ್ನಾರಿಗೂ ನಾವು ಕೊಡುವುದಿಲ್ಲ.

ذٰلِكَ جَزَيْنٰهُمْ بِمَا كَفَرُوْا ؕ وَهَلْ
نُجٰزِيْۤ اِلَّا الْكَفُوْرَ ﴿١٧﴾

18. ಅವರ ಮತ್ತು ನಾವು ಸಮೃದ್ಧಗೊಳಿಸಿದ್ದಂತಹ ನಾಡುಗಳ ನಡುವೆ ಸ್ಪಷ್ಟವಾದ ನಾಡುಗಳನ್ನು ನಾವು ನೆಲೆಗೊಳಿಸಿದ್ದೆವು ಮತ್ತು ಅವುಗಳಲ್ಲಿ ಪ್ರಯಾಣದ ದೂರಗಳನ್ನು ಒಂದು ಪ್ರಮಾಣದಲ್ಲಿರಿಸಿದ್ದೆವು.[4] ಅಹೋರಾತ್ರಿ ಸಂಪೂರ್ಣ ನೆಮ್ಮದಿಯೊಂದಿಗೆ ಈ ದಾರಿಗಳಲ್ಲಿ ಸಂಚರಿಸಿರಿ.

وَجَعَلْنَا بَيْنَهُمْ وَبَيْنَ الْقُرَى الَّتِيْ
بٰرَكْنَا فِيْهَا قُرًى ظَاهِرَةً وَّقَدَّرْنَا
فِيْهَا السَّيْرَ ؕ سِيْرُوْا فِيْهَا لَيَالِيَ وَ
اَيَّامًا اٰمِنِيْنَ ﴿١٨﴾

19. ಆದರೆ ಅವರು, "ನಮ್ಮ ಪ್ರಭೂ! ನಮ್ಮ ಪ್ರಯಾಣದ ದೂರವನ್ನು ಹೆಚ್ಚಿಸು"[5] ಎಂದರು. ಅವರು ತಮ್ಮ ಮೇಲೆ ತಾವೇ ಅಕ್ರಮವೆಸಗಿದರು. ಕೊನೆಗೆ ನಾವು ಅವರನ್ನು ಕಥೆಯನ್ನಾಗಿ ಮಾಡಿಬಿಟ್ಟೆವು ಮತ್ತು ಅವರನ್ನು ಸಂಪೂರ್ಣ ಛಿನ್ನ ಭಿನ್ನಗೊಳಿಸಿ ಬಿಟ್ಟೆವು. ನಿಶ್ಚಯವಾಗಿಯೂ ಸಹನಶೀಲ ಹಾಗೂ ಕೃತಜ್ಞನಾಗಿರುವ ಪ್ರತಿಯೊಬ್ಬನಿಗೂ ಇದರಲ್ಲಿ ನಿದರ್ಶನಗಳಿವೆ.

فَقَالُوْا رَبَّنَا بٰعِدْ بَيْنَ اَسْفَارِنَا وَظَلَمُوْۤا
اَنْفُسَهُمْ فَجَعَلْنٰهُمْ اَحَادِيْثَ وَمَزَّقْنٰهُمْ
كُلَّ مُمَزَّقٍ ؕ اِنَّ فِيْ ذٰلِكَ لَاٰيٰتٍ لِّكُلِّ
صَبَّارٍ شَكُوْرٍ ﴿١٩﴾

20. ಅವರ ವಿಷಯದಲ್ಲಿ ಇಬ್‌ಲೀಸನು ತನ್ನ ಗುಮಾನಿಯನ್ನು ಸತ್ಯವಾಗಿ ಕಂಡನು. ಸತ್ಯವಿಶ್ವಾಸಿಗಳಾಗಿದ್ದ ಕೆಲವೇ ಮಂದಿಯ ಒಂದು ಗುಂಪಿನ ಹೊರತು ಅವರೆಲ್ಲರೂ ಅವನನ್ನೇ ಅನುಸರಿಸಿದರು.

وَلَقَدْ صَدَّقَ عَلَيْهِمْ اِبْلِيْسُ ظَنَّهٗ
فَاتَّبَعُوْهُ اِلَّا فَرِيْقًا مِّنَ الْمُؤْمِنِيْنَ ﴿٢٠﴾

4. ಸಮೃದ್ಧ ನಾಡುಗಳು ಎಂದರೆ ಸಿರಿಯಾ ಮತ್ತು ಫೆಲೆಸ್ತೀನಿನ ಪ್ರದೇಶಗಳು. ಸುಸ್ಪಷ್ಟ ನಾಡುಗಳು ಎಂದರೆ ಹೆದ್ದಾರಿಯಲ್ಲಿರುವ ಮತ್ತು ಮರೆಯಲ್ಲಿ ಅಡಗಿರುವ ನಾಡುಗಳು. 'ಪ್ರಯಾಣದ ದೂರವನ್ನು ಒಂದು ಪ್ರಮಾಣದಲ್ಲಿರಿಸಿದ್ದೆವು' ಎಂದರೆ ಯಮನ್‌ನಿಂದ ಸಿರಿಯಾದ ತನಕದ ಪ್ರಯಾಣವನ್ನು ನಿರಂತರ ಜನವಾಸವಿರುವ ಪ್ರದೇಶಗಳ ಮೂಲಕವೇ ಕ್ರಮಿಸಬೇಕಾಗುತ್ತದೆ. ಅದರಲ್ಲಿ ಪ್ರತಿಯೊಂದು ತಾಣದಿಂದ ಇನ್ನೊಂದು ತಾಣದ ತನಕದ ದೂರ ನಿರ್ದಿಷ್ಟ ಮತ್ತು ನಿಶ್ಚಿತವಾಗಿದೆ.

5. ಅವರು ಬಾಯಿಯ ಮೂಲಕ ಹೀಗೆ ಪ್ರಾರ್ಥಿಸಿರಬೇಕಾಗಿಲ್ಲ. ಹಲವೊಮ್ಮೆ ವ್ಯಕ್ತಿಯ ಕರ್ಮದಿಂದ ದೇವನೊಡನೆ ಅವರು, “ನೀನು ನೀಡಿರುವಂತಹ ಕರ್ಮಗಳಿಗೆ ನಾನು ಬಾಧ್ಯಸ್ಥನಲ್ಲ” ಎಂದು ಹೇಳುತ್ತಿರುವಂತೆ ಭಾಸವಾಗುತ್ತದೆ. ಸೂಕ್ತದ ಪದಗಳಿಂದ ಸ್ಪಷ್ಟವಾಗುವುದೇನೆಂದರೆ ಆ ಸಮುದಾಯವು ಜನಸಂಖ್ಯೆಯ ಹೆಚ್ಚಳವನ್ನು ಒಂದು ಪಿಡುಗೆಂದು ಭಾವಿಸುತ್ತಿತ್ತು. ಆದ್ದರಿಂದ ಪ್ರಯಾಣದ ವೇಳೆ ದೂರದೂರಕ್ಕೊಂದು ತಾಣ ಸಿಗುವಷ್ಟು ಜನಸಂಖ್ಯೆ ಕಡಿಮೆಯಾಗಬೇಕು ಎಂದು ಆ ಸಮುದಾಯ ಬಯಸುತ್ತಿತ್ತು.

21. ಇಬ್‌ಲೀಸನಿಗೆ ಅವರ ಮೇಲೇನೂ ಅಧಿಕಾರ ಪ್ರಾಪ್ತವಿರಲಿಲ್ಲ. ಆದರೆ ಪರಲೋಕವನ್ನು ನಂಬುವವನಾರು ಮತ್ತು ಅದರ ಬಗ್ಗೆ ಸಂಶಯಗ್ರಸ್ತನಾರು ಎಂದು ನಾವು ತಿಳಿಯ ಬಯಸಿದ್ದುದರಿಂದ ಹೀಗೆಲ್ಲ ಆಯಿತು. ನಿನ್ನ ಪ್ರಭು ಪ್ರತಿಯೊಂದು ವಿಷಯದ ಮೇಲ್ನೋಟವುಳ್ಳವನಾಗಿರುತ್ತಾನೆ.

وَمَا كَانَ لَهُۥ عَلَيْهِم مِّن سُلْطَٰنٍ إِلَّا لِنَعْلَمَ مَن يُؤْمِنُ بِٱلْءَاخِرَةِ مِمَّنْ هُوَ مِنْهَا فِى شَكٍّ ۗ وَرَبُّكَ عَلَىٰ كُلِّ شَىْءٍ حَفِيظٌ ﴿٢١﴾ ع

22. (ಪೈಗಂಬರರೇ, ಈ ಬಹುದೇವವಿಶ್ವಾಸಿಗಳೊಡನೆ) ಹೇಳಿರಿ, "ನೀವು ಅಲ್ಲಾಹನ ಹೊರತಾಗಿ ನಿಮ್ಮ ಆರಾಧ್ಯರೆಂದು ಭಾವಿಸಿಕೊಂಡಿರುವವುಗಳನ್ನು ಪ್ರಾರ್ಥಿಸಿ ನೋಡಿರಿ. ಆಕಾಶಗಳಲ್ಲಾಗಲಿ, ಭೂಮಿಯಲ್ಲಾಗಲಿ ಅವರು ಅಣುಗಾತ್ರದ ವಸ್ತುವಿಗೂ ಒಡೆಯರಲ್ಲ. ಅವರು ಭೂಮಿ-ಆಕಾಶಗಳ ಸೊತ್ತಿನಲ್ಲಿ ಪಾಲುದಾರರೂ ಅಲ್ಲ, ಅವರಲ್ಲಾರೂ ಅಲ್ಲಾಹನ ಸಹಾಯಕನೂ ಅಲ್ಲ.

قُلِ ٱدْعُوا۟ ٱلَّذِينَ زَعَمْتُم مِّن دُونِ ٱللَّهِ ۖ لَا يَمْلِكُونَ مِثْقَالَ ذَرَّةٍ فِى ٱلسَّمَٰوَٰتِ وَلَا فِى ٱلْأَرْضِ وَمَا لَهُمْ فِيهِمَا مِن شِرْكٍ وَمَا لَهُۥ مِنْهُم مِّن ظَهِيرٍ ﴿٢٢﴾

23. ಅಲ್ಲಾಹನು ಶಿಫಾರಸು ಮಾಡಲು ಅನುಮತಿ ನೀಡಿದ ವ್ಯಕ್ತಿಯ ಹೊರತು ಅಲ್ಲಾಹನ ಸನ್ನಿಧಿಯಲ್ಲಿ ಯಾವ ಶಿಫಾರಸೂ ಯಾರ ಬಗೆಗೂ ಫಲಕಾರಿಯಾಗದು. ಎಷ್ಟರವರೆಗೆಂದರೆ- ಜನರ ಹೃದಯದಿಂದ ಭೀತಿಯು ದೂರವಾದಾಗ ಅವರು (ಶಿಫಾರಸುದಾರರೊಡನೆ) ನಿಮ್ಮ ಪ್ರಭು ಏನುತ್ತರ ಕೊಟ್ಟನೆಂದು ಕೇಳುವರು. ಸರಿಯಾದ ಉತ್ತರ ಸಿಕ್ಕಿದೆ ಮತ್ತು ಅವನು ಮಹೋನ್ನತನೂ ಮಹಾನನೂ ಆಗಿರುತ್ತಾನೆ" ಎಂದು ಅವರು ಹೇಳುವರು.

وَلَا تَنفَعُ ٱلشَّفَٰعَةُ عِندَهُۥٓ إِلَّا لِمَنْ أَذِنَ لَهُۥ ۚ حَتَّىٰٓ إِذَا فُزِّعَ عَن قُلُوبِهِمْ قَالُوا۟ مَاذَا قَالَ رَبُّكُمْ ۖ قَالُوا۟ ٱلْحَقَّ ۖ وَهُوَ ٱلْعَلِىُّ ٱلْكَبِيرُ ﴿٢٣﴾

24. (ಪೈಗಂಬರರೇ) ನಿಮಗೆ ಭೂಮಿ-ಆಕಾಶಗಳಿಂದ ಜೀವನಾಧಾರ ಕೊಡುವವನಾರೆಂದು ಇವರೊಡನೆ ಕೇಳಿರಿ. ಹೇಳಿರಿ- "ಅಲ್ಲಾಹ್. ಈಗ ನಿಶ್ಚಯವಾಗಿಯೂ ನಮ್ಮ ಮತ್ತು ನಿಮ್ಮ ಪೈಕಿ ಕೇವಲ ಒಬ್ಬನೇ ಸನ್ಮಾರ್ಗದಲ್ಲಿದ್ದಾನೆ ಅಥವಾ ಸುವ್ಯಕ್ತ ಪಥಭ್ರಷ್ಟತೆಯಲ್ಲಿದ್ದಾನೆ."

قُلْ مَن يَرْزُقُكُم مِّنَ ٱلسَّمَٰوَٰتِ وَٱلْأَرْضِ ۖ قُلِ ٱللَّهُ ۖ وَإِنَّآ أَوْ إِيَّاكُمْ لَعَلَىٰ هُدًى أَوْ فِى ضَلَٰلٍ مُّبِينٍ ﴿٢٤﴾

25. ಇವರೊಡನೆ ಹೇಳಿರಿ, "ನಾವು ಮಾಡಿದ ಅಪರಾಧದ ಕುರಿತು ನಿಮ್ಮೊಡನೆ ಪ್ರಶ್ನಿಸಲಾಗದು ಮತ್ತು ನೀವು ಮಾಡುತ್ತಿರುವುದರ ಕುರಿತು ನಮ್ಮೊಡನೆ ಪ್ರಶ್ನಿಸಲಾಗದು."

قُل لَّا تُسْـَٔلُونَ عَمَّآ أَجْرَمْنَا وَلَا نُسْـَٔلُ عَمَّا تَعْمَلُونَ ﴿٢٥﴾

26. ಹೇಳಿರಿ- ನಮ್ಮ ಪ್ರಭು ನಮ್ಮನ್ನು ಒಟ್ಟುಗೂಡಿಸುವನು ತರುವಾಯ ನಮ್ಮ ನಡುವೆ ಸರಿಯಾದ ತೀರ್ಮಾನ ಮಾಡುವನು. ಅವನು ಸರ್ವವನ್ನೂ ಅರಿತಿರುವಂತಹ ಪ್ರಬಲ ನ್ಯಾಯಾಧೀಶನಾಗಿರುತ್ತಾನೆ.

قُلْ يَجْمَعُ بَيْنَنَا رَبُّنَا ثُمَّ يَفْتَحُ بَيْنَنَا بِٱلْحَقِّ وَهُوَ ٱلْفَتَّاحُ ٱلْعَلِيمُ ﴿٢٦﴾

27. ಇವರೊಡನೆ- "ನೀವು ಅವನೊಂದಿಗೆ ಸಹಭಾಗಿಗಳಾಗಿ ಮಾಡಿಟ್ಟು ಕೊಂಡಿರುವವರನ್ನು ನನಗೊಮ್ಮೆ ತೋರಿಸಿ ಕೊಡಿರಿ ನೋಡೋಣ" ಎಂದು ಹೇಳಿರಿ. ಎಷ್ಟು ಮಾತ್ರಕ್ಕೂ ಇಲ್ಲ, ಅತ್ಯಂತ ಪ್ರಬಲನೂ ಧೀಮಂತನೂ ಆಗಿರುವಾತನು ಅಲ್ಲಾಹನು ಮಾತ್ರ.

قُلْ أَرُونِيَ الَّذِينَ أَلْحَقْتُم بِهِ شُرَكَاءَ
كَلَّا ۚ بَلْ هُوَ اللَّهُ الْعَزِيزُ الْحَكِيمُ ﴿٢٧﴾

28. (ಪೈಗಂಬರರೇ,) ನಾವು ನಿಮ್ಮನ್ನು ಸಕಲ ಮಾನವರಿಗೆ ಸುವಾರ್ತೆ ಕೊಡುವವರಾಗಿಯೂ ಎಚ್ಚರಿಕೆ ನೀಡುವವರಾಗಿಯೂ ಮಾಡಿ ಕಳುಹಿಸಿರುತ್ತೇವೆ. ಆದರೆ ಹೆಚ್ಚಿನವರು ಅರಿಯುವುದಿಲ್ಲ.

وَمَا أَرْسَلْنَاكَ إِلَّا كَافَّةً لِّلنَّاسِ بَشِيرًا
وَنَذِيرًا وَلَٰكِنَّ أَكْثَرَ النَّاسِ
لَا يَعْلَمُونَ ﴿٢٨﴾

29. "ನೀವು ಸತ್ಯವಂತರಾಗಿದ್ದರೆ, ಆ (ಪ್ರಳಯ ಕಾಲದ) ವಾಗ್ದಾನ ಯಾವಾಗ ನೆರವೇರುವುದು?" ಎಂದು ಕೇಳುತ್ತಾರೆ.

وَيَقُولُونَ مَتَىٰ هَٰذَا الْوَعْدُ إِن
كُنتُمْ صَادِقِينَ ﴿٢٩﴾

30. ಹೇಳಿರಿ- "ನಿಮಗೆ ನಾವು ಒಂದು ಘಳಿಗೆಯೂ ತಡ ಮಾಡಿ ತರಲು ಸಾಧ್ಯವಾಗದ ಹಾಗೂ ಒಂದು ಘಳಿಗೆಯೂ ಮುಂದಾಗಿ ತರಲಿಕ್ಕಾಗದ ಒಂದು ನಿಶ್ಚಿತ ದಿನದ ವಾಗ್ದಾನವಿದೆ."

قُل لَّكُم مِّيعَادُ يَوْمٍ لَّا تَسْتَأْخِرُونَ
عَنْهُ سَاعَةً وَلَا تَسْتَقْدِمُونَ ﴿٣٠﴾

النصف ٩ ع

31. ಈ ಕುರ್‌ಆನನ್ನೂ ಇದಕ್ಕಿಂತ ಮುಂಚೆ ಬಂದಿರುವಂತಹ ಯಾವ ಗ್ರಂಥವನ್ನೂ ನಾವು ಎಷ್ಟು ಮಾತ್ರಕ್ಕೂ ಒಪ್ಪಲಾರೆವೆಂದು ಈ ಸತ್ಯನಿಷೇಧಿಗಳು ಹೇಳುತ್ತಾರೆ. ಅಕಟ! ಈ ಅಕ್ರಮಿಗಳು ತಮ್ಮ ಪ್ರಭುವಿನ ಮುಂದೆ ನಿಲ್ಲುವಾಗಿನ ಇವರ ಅವಸ್ಥೆಯನ್ನು ನೀವು ಕಾಣುತ್ತಿದ್ದರೆ! ಆಗ ಇವರು ಪರಸ್ಪರ ಆರೋಪ ಹೊರಿಸು ವರು. ಈ ಲೋಕದಲ್ಲಿ ಮರ್ದಿತರಾಗಿದ್ದವರು ಅಹಂಕಾರಿ ಗಳೊಡನೆ, "ನೀವಿಲ್ಲದಿರುತ್ತಿದ್ದರೆ ನಾವು ಸತ್ಯವಿಶ್ವಾಸಿಗಳಾಗುತ್ತಿ ದ್ದೆವು" ಎನ್ನುವರು.

وَقَالَ الَّذِينَ كَفَرُوا لَن نُّؤْمِنَ بِهَٰذَا
الْقُرْآنِ وَلَا بِالَّذِي بَيْنَ يَدَيْهِ ۗ
وَلَوْ تَرَىٰ إِذِ الظَّالِمُونَ مَوْقُوفُونَ عِندَ
رَبِّهِمْ يَرْجِعُ بَعْضُهُمْ إِلَىٰ بَعْضٍ الْقَوْلَ
يَقُولُ الَّذِينَ اسْتُضْعِفُوا لِلَّذِينَ
اسْتَكْبَرُوا لَوْلَا أَنتُمْ لَكُنَّا مُؤْمِنِينَ ﴿٣١﴾

32. ಆ ಅಹಂಕಾರಿಗಳು ಈ ಮರ್ದಿತರೊಡನೆ, "ನಾವು ನಿಮ್ಮ ಬಳಿಗೆ ಬಂದಿದ್ದಂತಹ ಸನ್ಮಾರ್ಗದಿಂದ ನಿಮ್ಮನ್ನು ತಡೆದಿದ್ದೇವೆ? ಇಲ್ಲ, ವಾಸ್ತವದಲ್ಲಿ ಸ್ವತಃ ನೀವೇ ಅಪರಾಧಿಗಳಾಗಿದ್ದಿರಿ" ಎಂದು ಉತ್ತರಿಸುವರು.

قَالَ الَّذِينَ اسْتَكْبَرُوا لِلَّذِينَ اسْتُضْعِفُوا
أَنَحْنُ صَدَدْنَاكُمْ عَنِ الْهُدَىٰ بَعْدَ إِذْ
جَاءَكُم ۖ بَلْ كُنتُم مُّجْرِمِينَ ﴿٣٢﴾

33. ಆ ಮರ್ದಿತರು ಅಹಂಕಾರಿಗಳೊಡನೆ, ಅಲ್ಲ ವಾಸ್ತವದಲ್ಲಿ (ಅದು ನಿಮ್ಮದೇ) ಅಹೋರಾತ್ರಿಯ ಕುತಂತ್ರವಾಗಿತ್ತು. ನಾವು ಅಲ್ಲಾಹನನ್ನು ನಿಷೇಧಿಸಬೇಕೆಂದೂ ಇತರರನ್ನು ಅವನಿಗೆ ಸರಿ ಸಮಾನರಾಗಿ ಪರಿಗಣಿಸಬೇಕೆಂದೂ ನೀವು ನಮ್ಮೊಡನೆ ಹೇಳುತ್ತಿ ದ್ದಿರಿ ಎಂದು ಹೇಳುವರು. ಕೊನೆಗೆ ಇವರು ಯಾತನೆಯನ್ನು

وَقَالَ الَّذِينَ اسْتُضْعِفُوا لِلَّذِينَ اسْتَكْبَرُوا
بَلْ مَكْرُ اللَّيْلِ وَالنَّهَارِ إِذْ تَأْمُرُونَنَا أَن
نَّكْفُرَ بِاللَّهِ وَنَجْعَلَ لَهُ أَندَادًا ۚ وَأَسَرُّوا
النَّدَامَةَ لَمَّا رَأَوُا الْعَذَابَ ۗ وَجَعَلْنَا

ಕಾಣುವಾಗ ತಮ್ಮ ಮನಸ್ಸಿನಲ್ಲಿ ಪಶ್ಚಾತ್ತಾಪ ಪಡುವರು ಮತ್ತು ನಾವು ಈ ಸತ್ಯನಿಷೇಧಿಗಳ ಕೊರಳುಗಳಿಗೆ ಸಂಕೋಲೆಗಳನ್ನು ಹಾಕಿ ಬಿಡುವೆವು. ಜನರಿಗೆ ಅವರ ಕರ್ಮಗಳಿಗೆ ತಕ್ಕುದಾದ ಫಲವನ್ನೇ ಹೊರತು ಬೇರೆ ಪ್ರತಿಫಲವನ್ನು ಕೊಡಲು ಸಾಧ್ಯವೇ?

الْأَغْلَالَ فِي أَعْنَاقِ الَّذِينَ كَفَرُوا ۚ هَلْ يُجْزَوْنَ إِلَّا مَا كَانُوا يَعْمَلُونَ ﴿٣٣﴾

34. ನಾವು ಯಾವುದಾದರೊಂದು ನಾಡಿಗೆ ಎಚ್ಚರಿಕೆ ನೀಡುವವನನ್ನು ಕಳುಹಿಸಿದಾಗಲೆಲ್ಲಾ ಆ ನಾಡಿನ ಸ್ಥಿತಿವಂತರು- "ನೀವು ತಂದಿರುವ ಸಂದೇಶವನ್ನು ನಾವು ಸ್ವೀಕರಿಸುವುದಿಲ್ಲ" ಎಂದು ಹೇಳದೆ ಇರಲಿಲ್ಲ.

وَمَا أَرْسَلْنَا فِي قَرْيَةٍ مِنْ نَذِيرٍ إِلَّا قَالَ مُتْرَفُوهَا إِنَّا بِمَا أُرْسِلْتُمْ بِهِ كَافِرُونَ ﴿٣٤﴾

35. ನಾವು ನಿಮಗಿಂತ ಹೆಚ್ಚು ಸಂಪತ್ತನ್ನೂ ಸಂತತಿಯನ್ನೂ ಹೊಂದಿದ್ದೇವೆ. ನಾವು ಎಂದಿಗೂ ಶಿಕ್ಷೆ ಹೊಂದುವವರಲ್ಲವೆಂದೇ ಅವರು ಪ್ರತಿ ಸಲವೂ ಹೇಳಿದ್ದರು.

وَقَالُوا نَحْنُ أَكْثَرُ أَمْوَالًا وَأَوْلَادًا وَمَا نَحْنُ بِمُعَذَّبِينَ ﴿٣٥﴾

36. ಪೈಗಂಬರರೇ, ಇವರೊಡನೆ (ಹೀಗೆ) ಹೇಳಿರಿ- "ನನ್ನ ಪ್ರಭು ತಾನಿಚ್ಛಿಸಿದವರಿಗೆ ಯಥೇಷ್ಟ ಜೀವನಾಧಾರವನ್ನು ನೀಡುತ್ತಾನೆ ಮತ್ತು ತಾನಿಚ್ಛಿಸಿದವರಿಗೆ ಪರಿಮಿತಗೊಳಿಸುತ್ತಾನೆ. ಆದರೆ ಹೆಚ್ಚಿನವರು ಇದರ ವಾಸ್ತವಿಕತೆಯನ್ನು ತಿಳಿದಿರುವುದಿಲ್ಲ."

قُلْ إِنَّ رَبِّي يَبْسُطُ الرِّزْقَ لِمَنْ يَشَاءُ وَيَقْدِرُ وَلَٰكِنَّ أَكْثَرَ النَّاسِ لَا يَعْلَمُونَ ﴿٣٦﴾

37. "ನಿಮ್ಮನ್ನು ನಮಗೆ ನಿಕಟಗೊಳಿಸುವ ಸಾಧನ ನಿಮ್ಮ ಸಂಪತ್ತಾಗಲೀ ನಿಮ್ಮ ಸಂತಾನವಾಗಲೀ ಅಲ್ಲ. ಯಾರು ಸತ್ಯವಿಶ್ವಾಸ ಸ್ವೀಕರಿಸಿ ಸತ್ಕರ್ಮವೆಸಗುವರೋ ಅವರು ಇದಕ್ಕೆ ಹೊರತಾಗಿರುವರು. ಅವರಿಗೆ ಅವರ ಕರ್ಮದ ಇಮ್ಮಡಿ ಪ್ರತಿಫಲವಿದೆ ಮತ್ತು ಅವರು ಅತ್ಯುನ್ನತ ಭವನಗಳಲ್ಲಿ ನಿಶ್ಚಿಂತರಾಗಿರುವರು.

وَمَا أَمْوَالُكُمْ وَلَا أَوْلَادُكُمْ بِالَّتِي تُقَرِّبُكُمْ عِنْدَنَا زُلْفَىٰ إِلَّا مَنْ آمَنَ وَعَمِلَ صَالِحًا فَأُولَٰئِكَ لَهُمْ جَزَاءُ الضِّعْفِ بِمَا عَمِلُوا وَهُمْ فِي الْغُرُفَاتِ آمِنُونَ ﴿٣٧﴾

38. ಇನ್ನು ನಮ್ಮ ಸೂಕ್ತಗಳನ್ನು ಕೀಳಾಗಿಸಲಿಕ್ಕಾಗಿ ಶ್ರಮಿಸುವವರು ಅವರು ಯಾತನೆಗೊಳಗಾಗುವರು."

وَالَّذِينَ يَسْعَوْنَ فِي آيَاتِنَا مُعَاجِزِينَ أُولَٰئِكَ فِي الْعَذَابِ مُحْضَرُونَ ﴿٣٨﴾

39. ಪೈಗಂಬರರೇ ಇವರೊಡನೆ ಹೇಳಿರಿ- "ನನ್ನ ಪ್ರಭು ತನ್ನ ದಾಸರಲ್ಲಿ ತಾನಿಚ್ಛಿಸಿದವರಿಗೆ ವಿಸ್ತೃತ ಜೀವನಾಧಾರವನ್ನೀಯುತ್ತಾನೆ ಮತ್ತು ತಾನಿಚ್ಛಿಸಿದವರಿಗೆ ಪರಿಮಿತಗೊಳಿಸಿ ಕೊಡುತ್ತಾನೆ. ನೀವು ಖರ್ಚು ಮಾಡುವುದರ ಸ್ಥಾನದಲ್ಲಿ ಅವನೇ ನಿಮಗೆ ಇನ್ನಷ್ಟು ಕೊಡುತ್ತಾನೆ. ಅವನು ಜೀವನಾಧಾರ ನೀಡುವವರಲ್ಲಿ ಅತ್ಯುತ್ತಮನಾಗಿರುತ್ತಾನೆ."

قُلْ إِنَّ رَبِّي يَبْسُطُ الرِّزْقَ لِمَنْ يَشَاءُ مِنْ عِبَادِهِ وَيَقْدِرُ لَهُ ۚ وَمَا أَنْفَقْتُمْ مِنْ شَيْءٍ فَهُوَ يُخْلِفُهُ ۖ وَهُوَ خَيْرُ الرَّازِقِينَ ﴿٣٩﴾

40. ಅವನು ಸಕಲ ಮಾನವರನ್ನು ಒಟ್ಟುಗೂಡಿಸುವ ದಿನ ದೇವಚರರೊಡನೆ - "ಇವರು ನಿಮ್ಮ ಆರಾಧನೆಯನ್ನೇ ಮಾಡುತ್ತಿದ್ದರೇ?" ಎಂದು ಕೇಳುವನು.

وَيَوْمَ يَحْشُرُهُمْ جَمِيعًا ثُمَّ يَقُولُ لِلْمَلَـٰٓئِكَةِ أَهَـٰٓؤُلَآءِ إِيَّاكُمْ كَانُوا يَعْبُدُونَ ﴿٤٠﴾

41. ಆಗ ಅವರು, "ನೀನು ಪರಮ ಪಾವನನು. ನಮ್ಮ ಸಂಬಂಧವು ನಿನ್ನೊಂದಿಗಿದೆ- ಇವರೊಂದಿಗಲ್ಲ ವಾಸ್ತವದಲ್ಲಿ ಇವರು ಯಕ್ಷಗಳನ್ನು ಆರಾಧಿಸುತ್ತಿದ್ದರೇ ಹೊರತು ನಮ್ಮನ್ನಲ್ಲ. ಇವರಲ್ಲಿ ಹೆಚ್ಚಿನವರು ಅವರ ಮೇಲೆಯೇ ವಿಶ್ವಾಸವಿರಿಸಿದರು"[6] ಎಂದು ಉತ್ತರ ಕೊಡುವರು.

قَالُوا سُبْحَـٰنَكَ أَنتَ وَلِيُّنَا مِن دُونِهِمْ ۖ بَلْ كَانُوا يَعْبُدُونَ ٱلْجِنَّ ۖ أَكْثَرُهُم بِهِم مُّؤْمِنُونَ ﴿٤١﴾

42. (ಆಗ ನಾವು) "ಇಂದು ನಿಮ್ಮಲ್ಲಾರೂ ಯಾರಿಗೂ ಲಾಭವನ್ನಾಗಲಿ, ನಷ್ಟವನ್ನಾಗಲಿ ಉಂಟು ಮಾಡಲಾರರು" ಮತ್ತು ಅಕ್ರಮಿಗಳೊಡನೆ, "ನೀವು ಸುಳ್ಳಾಗಿಸುತ್ತಿದ್ದ ನರಕ ಯಾತನೆಯ ರುಚಿಯನ್ನು ಈಗ ಸವಿಯಿರಿ" ಎಂದು ಹೇಳುವೆವು.

فَٱلْيَوْمَ لَا يَمْلِكُ بَعْضُكُمْ لِبَعْضٍ نَّفْعًا وَلَا ضَرًّا ۖ وَنَقُولُ لِلَّذِينَ ظَلَمُوا ذُوقُوا عَذَابَ ٱلنَّارِ ٱلَّتِى كُنتُم بِهَا تُكَذِّبُونَ ﴿٤٢﴾

43. ಇವರಿಗೆ ನಮ್ಮ ಸುವ್ಯಕ್ತ ಸೂಕ್ತಗಳನ್ನು ಓದಿ ಹೇಳಿದಾಗ ಇವರು, "ನಿಮ್ಮ ಪೂರ್ವಜರು ಪೂಜಿಸುತ್ತಾ ಬಂದಿದ್ದಂತಹ ಆರಾಧ್ಯರಿಂದ ನಿಮ್ಮನ್ನು ತಿರುಗಿಸಿ ಬಿಡಬೇಕೆಂದೇ ಇವನ ಇಚ್ಛೆ" ಎನ್ನುತ್ತಾರೆ ಮತ್ತು "ಇದು (ಕುರ್‌ಆನ್) ಕೇವಲ ಒಂದು ಕಲ್ಪಿತ ಸುಳ್ಳು" ಎಂದು ಹೇಳುತ್ತಾರೆ. ಈ ಸತ್ಯನಿಷೇಧಿಗಳ ಮುಂದೆ ಸತ್ಯವು ಬಂದಾಗ ಇವರು, "ಇದು ಸ್ಪಷ್ಟವಾದ ಮಾಟವೇ ಹೊರತು ಇನ್ನೇನೂ ಅಲ್ಲ" ಎಂದು ಹೇಳಿ ಬಿಟ್ಟರು.

وَإِذَا تُتْلَىٰ عَلَيْهِمْ ءَايَـٰتُنَا بَيِّنَـٰتٍ قَالُوا مَا هَـٰذَآ إِلَّا رَجُلٌ يُرِيدُ أَن يَصُدَّكُمْ عَمَّا كَانَ يَعْبُدُ ءَابَآؤُكُمْ ۖ وَقَالُوا مَا هَـٰذَآ إِلَّآ إِفْكٌ مُّفْتَرًى ۚ وَقَالَ ٱلَّذِينَ كَفَرُوا لِلْحَقِّ لَمَّا جَآءَهُمْ إِنْ هَـٰذَآ إِلَّا سِحْرٌ مُّبِينٌ ﴿٤٣﴾

44. ವಸ್ತುತಃ ನಾವು ಈ ಮುಂಚೆ ಇವರಿಗೆ ಓದತಕ್ಕ ಯಾವುದೇ ಗ್ರಂಥವನ್ನು ಕೊಡಲೂ ಇಲ್ಲ ಮತ್ತು ನಿಮಗಿಂತ ಮುಂಚೆ ಇವರ ಕಡೆಗೆ ಎಚ್ಚರಿಕೆ ಕೊಡುವಂತಹವನನ್ನು ಕಳುಹಿಸಿದ್ದೂ ಇಲ್ಲ.

وَمَآ ءَاتَيْنَـٰهُم مِّن كُتُبٍ يَدْرُسُونَهَا ۖ وَمَآ أَرْسَلْنَآ إِلَيْهِمْ قَبْلَكَ مِن نَّذِيرٍ ﴿٤٤﴾

45. ಇವರಿಗಿಂತ ಮುಂಚೆ ಗತಿಸಿದವರು ಸುಳ್ಳಾಗಿಸಿದ್ದರು. ನಾವು ಅವರಿಗೆ ನೀಡಿದುದರ ದಶಾಂಶವನ್ನೂ ಇವರು ತಲುಪಿಲ್ಲ.

وَكَذَّبَ ٱلَّذِينَ مِن قَبْلِهِمْ وَمَا بَلَغُوا مِعْشَارَ مَآ ءَاتَيْنَـٰهُمْ فَكَذَّبُوا

6. ಅರೇಬಿಯಾದ ಬಹುದೇವವಿಶ್ವಾಸಿಗಳು ದೇವಚರರನ್ನು ಆರಾಧ್ಯರೆಂದು ಭಾವಿಸುತ್ತಿದ್ದರು. ಆದ್ದರಿಂದ ಅಲ್ಲಾಹನು, ನಿರ್ಣಾಯಕ ದಿನದಂದು ದೇವಚರರೊಂದಿಗೆ ಈ ಬಗ್ಗೆ ಕೇಳಲಾದಾಗ, "ಇವರು ನಮ್ಮ ಹೆಸರೆತ್ತಿ ಪಿಶಾಚಿಯ ಆರಾಧನೆ ಮಾಡುತ್ತಿದ್ದರೆಂದು ಹೇಳುವರು" ಎಂದಿದ್ದಾನೆ. ಏಕೆಂದರೆ ಅಲ್ಲಾಹನನ್ನು ಬಿಟ್ಟು ಇತರರನ್ನು ತಮ್ಮ ಇಷ್ಟಾರ್ಥ ಈಡೇರಿಸುವವರೆಂದು ಭಾವಿಸಿ ಅವರ ಮುಂದೆ ಹರಕೆ ಕಾಣಿಕೆಗಳನ್ನು ಒಪ್ಪಿಸಬೇಕೆಂಬ ವಿಧಾನವನ್ನು ಕಲಿಸಿದವನು ಪಿಶಾಚಿಯೇ ಆಗಿದ್ದಾನೆ.

رُسُلِىْ فَكَيْفَ كَانَ نَكِيْرِ ﴿٤٥﴾

ಆದರೆ ಅವರು ನನ್ನ ಸಂದೇಶವಾಹಕರನ್ನು ಸುಳ್ಳಾಗಿಸಿದಾಗ ನನ್ನ ಶಿಕ್ಷೆ ಎಷ್ಟು ಕಠಿಣವಾಗಿತ್ತೆಂದು ನೋಡಿಕೊಳ್ಳಿರಿ.

قُلْ اِنَّمَآ اَعِظُكُمْ بِوَاحِدَةٍ ۚ اَنْ تَقُوْمُوْا
لِلّٰهِ مَثْنٰى وَ فُرَادٰى ثُمَّ تَتَفَكَّرُوْا ۚ مَا
بِصَاحِبِكُمْ مِّنْ جِنَّةٍ ۭ اِنْ هُوَ اِلَّا نَذِيْرٌ
لَّكُمْ بَيْنَ يَدَىْ عَذَابٍ شَدِيْدٍ ﴿٤٦﴾

46. ಪೈಗಂಬರರೇ, ಇವರೊಡನೆ ಹೇಳಿರಿ- "ನಾನು ನಿಮಗೆ ಕೇವಲ ಒಂದು ವಿಷಯದ ಉಪದೇಶ ನೀಡುತ್ತೇನೆ. ನೀವು ಅಲ್ಲಾಹನಿಗಾಗಿ ಒಬ್ಬೊಬ್ಬರಾಗಿಯೂ ಇಬ್ಬಿಬ್ಬರು ಸೇರಿಕೊಂಡೂ ಚಿಂತನೆ ನಡೆಸಿರಿ ಮತ್ತು ನಿಮ್ಮ ಸಂಗಾತಿಯಲ್ಲಿ[7] ಉನ್ಮಾದದಂತಹ ವಿಷಯ ಏನಿದೆಯೆಂದು ಯೋಚಿಸಿರಿ. ಅವರಂತು ಒಂದು ಘೋರ ಯಾತನೆ ಬರುವುದಕ್ಕೆ ಮುಂಚೆ ನಿಮಗೆ ಎಚ್ಚರಿಕೆ ನೀಡುವವರಾಗಿದ್ದಾರೆ."

قُلْ مَا سَاَلْتُكُمْ مِّنْ اَجْرٍ فَهُوَ لَكُمْ ۭ
اِنْ اَجْرِىَ اِلَّا عَلَى اللّٰهِ ۚ وَ هُوَ عَلٰى كُلِّ
شَىْءٍ شَهِيْدٌ ﴿٤٧﴾

47. ಇವರೊಡನೆ ಹೇಳಿರಿ- "ನಾನು ನಿಮ್ಮಿಂದೇನಾದರೂ ಪ್ರತಿಫಲ ಕೇಳಿದ್ದರೆ ಅದು ನಿಮಗೇ ಇರಲಿ. ನನ್ನ ಪ್ರತಿಫಲ ಕೇವಲ ಅಲ್ಲಾಹನಲ್ಲಿದೆ ಮತ್ತು ಅವನು ಪ್ರತಿಯೊಂದಕ್ಕೆ ಸಾಕ್ಷಿ ಯಾಗಿರುತ್ತಾನೆ."

قُلْ اِنَّ رَبِّىْ يَقْذِفُ بِالْحَقِّ ۚ عَلَّامُ
الْغُيُوْبِ ﴿٤٨﴾

48. ಇವರೊಡನೆ ಹೇಳಿರಿ- "ನನ್ನ ಪ್ರಭು (ನನ್ನ ಮೇಲೆ) ಸತ್ಯವನ್ನು ಇಳಿಸುತ್ತಾನೆ ಮತ್ತು ಅವನು ಸಕಲ ಪರೋಕ್ಷ ವಾಸ್ತವಿಕತೆಗಳನ್ನು ಬಲ್ಲವನು."

قُلْ جَآءَ الْحَقُّ وَ مَا يُبْدِئُ الْبَاطِلُ
وَ مَا يُعِيْدُ ﴿٤٩﴾

49. ಹೇಳಿರಿ- "ಈಗ ಸತ್ಯವು ಬಂದು ಬಿಟ್ಟಿತು ಇನ್ನು ಮಿಥ್ಯದಿಂದ ಏನು ಮಾಡಲಿಕ್ಕೂ ಆಗದು."

قُلْ اِنْ ضَلَلْتُ فَاِنَّمَآ اَضِلُّ عَلٰى نَفْسِىْ ۚ
وَ اِنِ اهْتَدَيْتُ فَبِمَا يُوْحِىْٓ اِلَىَّ رَبِّىْ ۭ
اِنَّهٗ سَمِيْعٌ قَرِيْبٌ ﴿٥٠﴾

50. ಹೇಳಿರಿ- "ನಾನು ಪಥಭ್ರಷ್ಟನಾಗಿ ಹೋದರೆ ನನ್ನ ಪಥಭ್ರಷ್ಟತೆಯ ಪಾತಕ ನನ್ನ ಮೇಲಿರುವುದು ಮತ್ತು ನಾನು ಸನ್ಮಾರ್ಗದಲ್ಲಿದ್ದರೆ, ನನ್ನ ಪ್ರಭು ನನ್ನ ಮೇಲೆ ಅವತೀರ್ಣ ಗೊಳಿಸುವ (ದಿವ್ಯವಾಣಿಯ) ಆಧಾರದಲ್ಲಿರುತ್ತೇನೆ. ಅವನು ಸರ್ವಶ್ರುತನೂ ಅತ್ಯಂತ ನಿಕಟನೂ ಆಗಿರುತ್ತಾನೆ."

وَ لَوْ تَرٰٓى اِذْ فَزِعُوْا فَلَا فَوْتَ وَ اُخِذُوْا
مِنْ مَّكَانٍ قَرِيْبٍ ﴿٥١﴾

51. ಇವರು ಗಾಬರಿಗೊಂಡು ಅಲೆದಾಡುತ್ತಿರುವಾಗ ಹಾಗೂ ಎಲ್ಲೂ ತಪ್ಪಿಸಿಕೊಳ್ಳಲಾಗದಿರುವಾಗ ಮಾತ್ರವಲ್ಲ ಹತ್ತಿರದಿಂದಲೇ ಸೆರೆ ಹಿಡಿಯಲ್ಪಡುವಾಗ ನೀವು ಇವರನ್ನು ನೋಡುತ್ತಿದ್ದರೆ!

7. ಅರ್ಥಾತ್- ಪ್ರವಾದಿವರ್ಯರು(ಸ). ಪ್ರವಾದಿವರ್ಯರು(ಸ) ಅವರ ಪಾಲಿಗೆ ಅಪರಿಚಿತ ವ್ಯಕ್ತಿಯಾಗಿರಲಿಲ್ಲ. ಬದಲಾಗಿ ಅವರ ನಗರದ ನಿವಾಸಿ ಮತ್ತು ಗೋತ್ರಜರೇ ಆಗಿದ್ದರು. ಆದ್ದರಿಂದ ಅವರ ಕುರಿತು 'ಸಾಹಿಬ್' ಅಥವಾ ಸಂಗಾತಿ ಎಂಬ ಪದ ಬಳಸಲಾಗಿದೆ.

52. ಆಗ ಇವರು, "ನಾವು ಅದರ ಮೇಲೆ ವಿಶ್ವಾಸವಿರಿಸಿದೆವು" ಎನ್ನುವರು. ವಸ್ತುತಃ ದೂರ ಹೋಗಿಬಿಟ್ಟ ವಸ್ತು ಈಗ ಕೈ ಸೇರುವುದು ಹೇಗೆ?

وَّقَالُوْٓا اٰمَنَّا بِهٖ ۚ وَاَنّٰى لَهُمُ التَّنَاوُشُ
مِنْ مَّكَانٍۢ بَعِيْدٍ ۝٥٢

53. ಇದಕ್ಕೆ ಮುಂಚೆ ಇವರು ಇದನ್ನು ನಿರಾಕರಿಸಿದ್ದರು ಮತ್ತು (ಪರಾಮರ್ಶೆಯೇನೂ ನಡೆಸದೆ) ಗಾಳಿಮಾತುಗಳನ್ನು ಆಡುತ್ತಿದ್ದರು.

وَّقَدْ كَفَرُوْا بِهٖ مِنْ قَبْلُ ۚ وَيَقْذِفُوْنَ
بِالْغَيْبِ مِنْ مَّكَانٍۢ بَعِيْدٍ ۝٥٣

54. ಇವರಂತೆ ಇದ್ದ ಇವರ ಪೂರ್ವಜರು ವಂಚಿಸಲ್ಪಟ್ಟಿರುವಂತೆಯೇ, ಇವರು ಕೂಡಾ ಯಾವುದನ್ನು ಆಶಿಸುತ್ತಿರುವರೋ ಅದರಿಂದ ವಂಚಿಸಲ್ಪಡುವರು. ಇವರೊಂದು ಭಾರೀ ದಾರಿಗೆಡಿಸುವ ಸಂಶಯ ದಲ್ಲಿ ಬಿದ್ದುಕೊಂಡಿದ್ದರು.

وَحِيْلَ بَيْنَهُمْ وَبَيْنَ مَا يَشْتَهُوْنَ
كَمَا فُعِلَ بِاَشْيَاعِهِمْ مِّنْ قَبْلُ ۗ
اِنَّهُمْ كَانُوْا فِيْ شَكٍّ مُّرِيْبٍ ۝٥٤ ع
